ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE 23/1/2020

# ಟಾರ್ಗೆಟ್ ಹ್ಯಾರಿಸ್

ಉದಯ 23/1/20

## ಅನುಮಾನಾಸ್ಪದ ಸ್ಫೋಟದಲ್ಲಿ ಶಾಸಕರಿಗೆ ಗಾಯ

ಬೆಂಗಳೂರು: ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಅನುಮಾನಾಸ್ಪದ ವಸ್ತು ಸ್ಫೋಟಗೊಂಡ ಪರಿಣಾಮ ಶಾಂತಿನಗರ ಶಾಸಕ ಎನ್. ಎ ಹ್ಯಾರಿಸ್ ಸೇರಿದಂತೆ ಏಳು ಮಂದಿ ಗಾಯಗೊಂಡಿರುವ ಘಟನೆ ಅಶೋಕನಗರ ಪೊಲೀಸ್ ಠಾಣೆಯ ವ್ಯಾಪ್ತಿಯ ವನ್ನಾರ್ ಪೇಟೆಯಲ್ಲಿ ನಡೆದಿದೆ.



ಅಪರಿಚಿತ ವ್ಯಕ್ತಿಗಳು ಅನುಮಾನಾಸ್ಪದ ಸ್ಫೋಟಕವನ್ನು ಎಸೆದ ಪರಿಣಾಮ ಈ ಘಟನೆ ನಡೆದಿದೆ. ಗಾಯಗೊಂಡಿರುವ ಶಾಸಕ ಹ್ಯಾರಿಸ್ ಮತ್ತಿತರರಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಹ್ಯಾರಿಸ್ ಅವರ ಬಲಕಾಲಿನ ತೊಡೆಗೆ ಪೆಟ್ಟಾಗಿದೆ ಎಂದು ಹೇಳಲಾಗುತ್ತಿದೆ. ಗಾಯಾಳುಗಳಿಗೆ ಚಿಕಿತ್ಸೆ ಮುಂದುವರಿದಿದ್ದು ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ವೈದ್ಯರು ಹೇಳಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಸಕ ಹ್ಯಾರಿಸ್ ಗುರಿಯಾಗಿಸಿ ಎಸೆಯಲಾಗಿರುವ ಸ್ಫೋಟಕ ಹಲವು ಸಂಶಯಗಳನ್ನು ಹುಟ್ಟುಹಾಕಿದ್ದು ರಾಜಕೀಯ ವೈರಿಗಳು ಅಥವಾ ನಿಷಿದ್ಧ ಸಂಘಟನೆಯಿಂದ ಕೃತ್ಯ ನಡೆದಿದೆಯೇ ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ವೈದ್ಯ ಮೂಲಗಳ ಪ್ರಕಾರ ಹ್ಯಾರಿಸ್‌ಗೆ ಕಬ್ಬಿಣದ ಚೂರು(ಪೆಲೆಟ್)ಗಳಿಂದ ಗಾಯ ಗಳಾಗಿವೆ. ಹಾಗಾಗಿ ಸ್ಫೋಟಕ ವಸ್ತುಗಳು ಬಳಕೆಯಾಗಿರುವುದು ಎಂದು ಶಂಕಿಸಲಾಗಿದೆ. ▸ 4ನೇ ಪುಟಕ್ಕೆ



ಹ್ಯಾರಿಸ್ ಅವರ ಆರೋಗ್ಯ ವಿಚಾರಿಸಲು ಆಸ್ಪತ್ರೆಯಲ್ಲಿ ಸೇರಿರುವ ಅಭಿಮಾನಿಗಳು.

### ಉದ್ದೇಶಪೂರ್ವಕ ಕೃತ್ಯ: ಮೊಹಮದ್ ನಲಪಾಡ್

ಶಾಸಕ ಹ್ಯಾರಿಸ್ ಹುಟ್ಟುಹಬ್ಬದ ಆಚರಣೆ ಸಲುವಾಗಿ ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳು ಈ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿದ್ದರು. ಉದ್ದೇಶಪೂರ್ವಕವಾಗಿಯೇ ಬಾಂಬ್ ಮಾದರಿಯ ವಸ್ತುವನ್ನು ತಮ್ಮ ತಂದೆಯ ಕಡೆ ಎಸೆದಿದ್ದಾರೆ ಎಂದು ಹ್ಯಾರಿಸ್ ಪುತ್ರ ಮೊಹಮದ್ ನಲಪಾಡ್ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಹ್ಯಾರಿಸ್ ಅವರು ಕುರ್ಚಿಯಲ್ಲಿ ಕುಳಿತುಕೊಳ್ಳಲು ಯತ್ನಿಸುತ್ತಿದ್ದಾಗಲೇ ಹಸಿರು ಬಾಲ್ ಮಾದರಿಯ ವಸ್ತು ಎಸೆದಿದ್ದಾರೆ. ಅದು ಮೋಹನ್ ಎಂಬುವರರ ಕೈಗೆ ತಾಗಿ ಪುನಃ ಸ್ಫೋಟಗೊಂಡಿದೆ. ಪರಿಣಾಮ ತಂದೆ ಹ್ಯಾರಿಸ್ ಅವರ ಬಲಕಾಲು, ಕಿವಿಗೆ ಹಾನಿಯಾಗಿದೆ. ಜತೆಗೆ, ಮೋಹನ್, ಸುಂದರ್, ಚುಟ್ಟಿಬಾಬು ಸೇರಿ ಇಬ್ಬರು ಮಹಿಳೆಯರಿಗೂ ಗಾಯವಾಗಿದೆ ಎಂದು ನಲಪಾಡ್ ಹೇಳಿದ್ದಾರೆ. ತಂದೆ ಹ್ಯಾರಿಸ್‌ಗೆ ಯಾರೂ ವಿರೋಧಿಗಳಿರಲಿಲ್ಲ. ಅವರು ಒಬ್ಬೊಬ್ಬರೇ ಓಡಾಡುತ್ತಿದ್ದರು. ಈ ಘಟನೆ ಆಘಾತ ತಂದಿದೆ. ಈ ಹಿಂದೆ ಕ್ಷೇತ್ರದಲ್ಲಿ ಇಂತಹ ಘಟನೆಗಳು ಆಗಿರಲಿಲ್ಲ. ಯಾರೋ ಉದ್ದೇಶಪೂರ್ವಕವಾಗಿಯೇ ಕೃತ್ಯ ಎಸಗಿದ್ದಾರೆ. ಪೊಲೀಸರ ತನಿಖೆ ಮೇಲೆ ವಿಶ್ವಾಸವಿದೆ ಎಂದು ನಲಪಾಡ್ ತಿಳಿಸಿದ್ದಾರೆ.

23/1/20

# ಟಾರ್ಗೆಟ್ ಹ್ಯಾರಿಸ್

1ನೇ ಪುಟದಿಂದ ▸ ಘಟನಾ ಸ್ಥಳದಲ್ಲಿ ದೊರೆತಿರುವ ಸ್ಫೋಟಕ ಪುಡಿ, ಗುಂಡಿನಂತಿರುವ ವಸ್ತುಗಳನ್ನು ಪರಿಶೀಲಿಸಿರುವ ಪೊಲೀಸರು, ಶಸ್ತ್ರಾಸ್ತ್ರಗಳಿಗೆ ತುಂಬಲಾಗುವ ಪುಡಿ ಮತ್ತು ಕಬ್ಬಿಣದ ಚೂರುಗಳನ್ನು ಹೊಂದಿರುವ ಸ್ಫೋಟಕ ಸಾಮಗ್ರಿಗೆ ಬಳಸುವ ವಸ್ತುಗಳಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. ಸ್ಫೋಟಕ ಪುಡಿ, ಗುಂಡುಗಳನ್ನು ಬಳಸಿ ನಾಡ ಬಾಂಬ್ ತಯಾರಿಸಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಒಂದು ಮಾಹಿತಿ ಪ್ರಕಾರ ಕಾರ್ಯಕ್ರಮ ನಡೆದ ಪಕ್ಕದ ಬೀದಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರೀ ಸದ್ದು ಮಾಡುವ ಪಟಾಕಿಗಳನ್ನು ಸ್ಫೋಟಿಸಲಾಗುತ್ತಿತ್ತು. ಅದೇನಾದರೂ ಬಂದು ಬಿದ್ದಿರುವ ಸಾಧ್ಯತೆ ಇದೆಯೇ ಎಂದೂ ತನಿಖೆ ನಡೆದಿದೆ. ಆದರೆ, ಎಫ್ಎಸ್ಎಲ್ ವರದಿ ಬಂದ ಬಳಿಕವೇ ಈ ಬಗ್ಗೆ ಸ್ಪಷ್ಟತೆ ಸಿಗಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಹಿಂದೆ ಮೈಸೂರಿನಲ್ಲಿ ಶಾಸಕರ ತನ್ವೀರ್ ಸೇಠ್ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿತ್ತು. ಈಗ ಅದೇ ಸಮುದಾಯದ ಇನ್ನೊಬ್ಬರು ಶಾಸಕರ ಮೇಲೆ ದಾಳಿ ನಡೆದಂತಿದೆ. ಈ ಬಗ್ಗೆ ಆಮೂಲಾಗ್ರವಾಗಿ ತನಿಖೆ ನಡೆಸಲಾಗುವುದು ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದ್ದಾರೆ.

**ದಿಕ್ಕಾಪಾಲಾದ ಜನ! :** ಘಟನಾ ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಸ್ಫೋಟ ನಡೆದ ಕೂಡಲೇ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನ ಆತಂಕದಿಂದ ದಿಕ್ಕಾಪಾಲಾಗಿ ಓಡಿದ್ದಾರೆ. ಕಾರ್ಯಕ್ರಮವು ರದ್ದಾಗಿದ್ದು ಜನ ಭಯಭೀತಗೊಂಡಿದ್ದು ವಿಷಯ ತಿಳಿದ ಕೂಡಲೇ ಘಟನಾ ಸ್ಥಳಕ್ಕೆ ಧಾವಿಸಿದ ಪೊಲೀಸರು ಇಡೀ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದಾರೆ. ಶ್ವಾನದಳ, ಬಾಂಬ್ ನಿಷ್ಕ್ರಿಯ ದಳ, ವಿಧಿವಿಜ್ಞಾನ ಪ್ರಯೋಗಾಲಯ ಸಿಬ್ಬಂದಿ ಸ್ಥಳಪರಿಶೀಲನೆ ನಡೆಸಿ ಸ್ಫೋಟದ ತುಣುಕುಗಳನ್ನು ಸಂಗ್ರಹಿಸಿದ್ದಾರೆ. ಹೆಚ್ಚುವರಿ ಪೊಲೀಸ್ ಆಯುಕ್ತ ಉಮೇಶ್‌ಕುಮಾರ್, ಕೇಂದ್ರ ವಿಭಾಗದ ಡಿಸಿಪಿ ಚೇತನ್ ಸಿಂಗ್ ರಾಥೋಡ್ ಸೇರಿ ಹಿರಿಯ ಪೊಲೀಸ್ ಅಧಿಕಾರಿಗಳು ಪರಿಶೀಲನೆ ನಡೆಸಿ ಸಿಬ್ಬಂದಿಯಿಂದ ಮಾಹಿತಿ ಪಡೆದರು. ಹ್ಯಾರಿಸ್ ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಯ ಮುಂಭಾಗ ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಜಮಾಯಿಸಿದ್ದರು. ಅವರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು. ಮುಂಜಾಗ್ರತಾ ಕ್ರಮವಾಗಿ ಆಸ್ಪತ್ರೆ ಬಳಿ ಹೆಚ್ಚಿನ ಭದ್ರತೆ ಕಲ್ಪಿಸಲಾಗಿದೆ.

---

**ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು ಹಲವು ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದೆ. ಸ್ಫೋಟಗೊಂಡ ವಸ್ತುವಿನ ಭಾಗಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದ್ದು, ಅದು ಯಾವ ವಸ್ತು ಎಂದು ತನಿಖೆಯಿಂದ ಹೊರಬರಬೇಕಿದೆ.**

• ಭಾಸ್ಕರ್ ರಾವ್, ನಗರ ಪೊಲೀಸ್ ಆಯುಕ್ತ